ಉಗುಳುನುಂಗುತ್ತಾ, ಹೇಳಿದ್ದಳು ಸೀತೆ,

"ಹಳ್ಳಿಮುಕ್ಕ, ನಂಗೆಂತಾ ಗೊತ್ತಾಗುತ್ತೆ ಅಣ್ಣ? ಯಾರ್‍ಯಾರೋ ಹೇಳೋದನ್ನ ಕೇಳಿ..."

"ನಾನೂ ಕೇಳಿದೀನಿ ಕಣೇ, ಓದಿದೀನಿ ಕಣೇ..." ಸುಳ್ಳಾಡಿರಲಿಲ್ಲ ಭಟ್ಟರು. ಅವರೂ ದಿನಂಪ್ರತಿ ಪೇಪರು ಓದುತ್ತಾರೆ. ಟೀವಿ ಗೀವಿ ನೋಡುತ್ತಾರೆ. ಹಳ್ಳಿಮೂಲೆಯಲ್ಲಿ ಕೂತಿದ್ದರೂ ಲೋಕಜ್ಞಾನ ತಮಗೆ ಬೇಕಾದಷ್ಟಿದೆ ಅಂದುಕೊಂಡಿದ್ದಾರೆ. ಆರೋಗ್ಯವಿಜ್ಞಾನ ಏನೇ ಹೇಳಲಿ, ಅದಕ್ಕಿಂತಾ ಮಗಳ ಮೇಲಿನ ವ್ಯಾಮೋಹ ಹೆಚ್ಚಾಗಿ ಅವಳನ್ನು ಕಂಡುಕೇಳಿ, ಸಾಕಿಬೆಳೆಸಿದವನಿಗೆ ಕೊಡಬೇಕು ಅಂದುಕೊಂಡಿದ್ದೇ ವಿನಾ ಮತ್ತೇನಿಲ್ಲ. ಆಯ್ತಲ್ಲ, ಅವರ ಎಲ್ಲಾ ಕನಸುಗಳಿಗೂ ಸೋದರಳಿಯ ತಣ್ಣೀರು ತೋಕಿದನಲ್ಲ? 'ಒಲ್ಲೆ' ಅಂದವನನ್ನು ಬಲವಂತ ಮಾಡಿ ಅವನ ಕುತ್ತಿಗೆಯ ಮೇಲೆ ಕೂರುವಷ್ಟು ಭಟ್ಟರು ನಿರಭಿಮಾನಿ ಆಗಿರಲಿಲ್ಲ. ಸತೀಶನ ಮಾತು ಕೇಳಿ ತಮಗೆ ಯಾವ ಆಶಾಭಂಗವೂ ಆಗಿಲ್ಲ, ಎಲ್ಲಾ ಯಥಾಯಥಾ ಅನ್ನುವಂತೆ ಎಲ್ಲರ ಜೊತೆ ಮಾಮೂಲಿನಂತಿದ್ದರು. ಇವರ ಋಣ ತಂಗಿಯ ಮೇಲೆ ಹೇಗೆ ಇತ್ತೋ ಹಾಗೆಯೇ ಅವಳ ಋಣವೂ ಇವರ ಮೇಲೆ ಇತ್ತಲ್ಲ?

ಸೀತೆಗೆ ಆಶ್ರಯದ ಭರವಸೆ ನೀಡಿ ಹೃತ್ಪೂರ್ವಕವಾಗಿ ತಮ್ಮ ನೆರಳಿಗೆ ಕರೆತಂದಿದ್ದಕ್ಕೆ ಭಟ್ಟರು ರಕ್ತಸಂಬಂಧದ ಸಕಾರಣ ಕೊಡಬಹುದು. ಆದರೆ, ಭಟ್ಟರ ಹೆಂಡತಿ ಸರೋಜನ ದೊಡ್ಡ ಮನಸ್ಸಿಗೆ ಯಾವ ಕಾರಣ ಕೊಡಬಹುದು? ಮದುವೆಯಾಗಿ ಹದಿನೈದು ವರ್ಷ ಕಳೆದಿದ್ದರೂ ಮಕ್ಕಳ ಭಾಗ್ಯ ಕಾಣದೆ ಹತಾಶರಾಗಿದ್ದ ದಂಪತಿಗೆ ಪುಟ್ಟ ಮಗುವೊಂದು ಮನೆಗೆ ಬಂದಿದ್ದು ನಿಧಿ ಸಿಕ್ಕಿದಂತಾಗಿತ್ತು. ಅದರ ಆಟಪಾಠ, ಚೇಷ್ಟೆಗಲಾಟೆಗಳಿಂದ ಮನೆಯೆಂಬೋ ಮನೆ ಗಲಗಲಿಸಿ, ಯಾರು ಸತೀಶನ ಹೆತ್ತಮ್ಮ? ಯಾವಾಗ ನೋಡಿದರೂ ಮಗು ಸರೋಜನ ಸೊಂಟದ ಮೇಲೆ. ಎಡಗೈಯಲ್ಲಿ ಉಪ್ಪು, ತುಪ್ಪ ಹಾಕಿ ಮಿದ್ದ ಅನ್ನದ ತಟ್ಟೆ ಹಿಡಿದು, ಬಲಗೈಯಿಂದ ಪೋರನ ಬಾಯಿಗೆ ತುತ್ತು ತಿನಿಸುತ್ತಾ, 'ಇದು ಅಮ್ಮನ ತುತ್ತು, ಇದು ಅತ್ತೆಯ ತುತ್ತು, ಇದು ಮಾವನ ತುತ್ತು...' ಕೊಟ್ಟಿಗೆಯಲ್ಲಿದ್ದ ಹಸುಕರುಗಳಾದಿಯಾಗಿ ಪ್ರತಿಯೊಂದರ ಹೆಸರು ಹೇಳುತ್ತಾ ಊಟ ಮಾಡಿಸುವ ಕಸರತ್ತು. ಮಗನನ್ನು ಅತ್ತಿಗಮ್ಮನ ವಶಕ್ಕೊಪ್ಪಿಸಿ ನಿರ್ಯೋಚನೆಯಿಂದ ಮನೆಕೆಲಸಗಳನ್ನು ವಹಿಸಿಕೊಂಡಿದ್ದಳು ಸೀತೆ. ನಿರ್ಯೋಚನೆಯಿಂದಲೇ ಅಥವಾ ತನ್ನ ದೌರ್ಭಾಗ್ಯ ನೆನಪಾಗದಷ್ಟು ದುಡಿಮೆ ಹಚ್ಚಿಕೊಂಡು ಎಲ್ಲ ಮರೆಯುವ ಪ್ರಯತ್ನವೋ?

ಸತೀಶನಿಗೆ ಮೂರು ತುಂಬುವುದರಲ್ಲಿದ್ದಾಗ ಒಂದು ಶುಭ ದಿನ ಅಕ್ಷರಾಭ್ಯಾಸ. ಮಾವ ಮಗುವನ್ನು ತೊಡೆಯ ಮೇಲೆ ಕೂರಿಸಿಕೊಂಡು, ದೇವರೆದುರು ಬೆಳಗುತ್ತಿದ್ದ ನಂದಾದೀಪದ ಬೆಳಕಲ್ಲಿ ಬೆಳ್ಳಿತಟ್ಟೆಯೊಳಗೆ ಹರಡಿದ್ದ ಅಕ್ಕಿಕಾಳುಗಳ ಮೇಲೆ ಅರಿಶಿನದ ಕೊಂಬಿನಿಂದ ಶ್ರೀಕಾರ ಬರೆಸುವ ಸಂಭ್ರಮ. ಹಾಲುಪಾಯಸದ ನೈವೇದ್ಯ ಅರ್ಪಿಸಿಕೊಂಡು ಸಂತೃಪ್ತನಾದ ಮನೆದೇವರು. ಬಾಗಿಲ ಹಿಂದೆ ನಿಂತು ಕಣ್ಣೊರೆಸಿಕೊಳ್ಳುತ್ತಿದ್ದ ಸೀತೆ ಸರೋಜನ ಕಣ್ಣಿಗೆ ಬಿದ್ದು ಅವಳು ಅನುನಯಿಸಿ ಕೇಳಿದ್ದಳು,

"ಏನಾಯ್ತು ಸೀತೇ? ಏನಾಯ್ತು ಹೇಳೇ..."

"ನನ್ನ ಮಗು ತಬ್ಬಲಿ ಅಂತ ಯಾರು ಹೇಳ್ತಾರೆ?"

ಮುಂದೆ ಮಾತಾಡಲಾಗದೆ ಗಂಟಲ ನರ ಉಬ್ಬುಬ್ಬಿ, ವಿನಾಕಾರಣ ಅನ್ನುವಂತೆ ಸರೋಜನೂ ಕಣ್ಣೀರಾಗಿದ್ದು ಮೊನ್ನೆ ಮೊನ್ನೆ ಅನ್ನುವ ಹಾಗೆ ಭಟ್ಟರಿಗೆ ನೆನಪಿದೆ.

ಅತ್ತ ಸತೀಶ ಸ್ಕೂಲಿಗೆ ಹೋಗಿ ಬರತೊಡಗಿದ. ಅವನ ತುಂಟಾಟಗಳಿಂದ ಅನುರಣಿಸುತ್ತಿದ್ದ